20.	ನ್ಯೂ ತಮಿಳಿಯನ್ ಕಾಲೋನಿ	ರಸ್ತೆ, ಚರಂಡಿ ಕೊಳವೆ ಬಾವಿ	3.03
21.	ಕಲ್ಲಹಳ್ಳಿ ಮುಸ್ಲಿಂ ಬ್ಲಾಕ್	ರಸ್ತೆಚರಂಡಿ, ಅಂಗನವಾಡಿ ಕಿರುನೀರು ಸರಬರಾಜು	1.90
22.	ಅಂಗವಿಕಲರ ಕಾಲೋನಿ	ಸಾತನೂರು ಬಡಾವಣೆಗೆ ಭಾಗಶಃ ಸ್ಥಳಾಂತರಿಸಿದೆ	
23.	ವೇಣುಗೋಪಾಲ ಶಿಶುವಿಹಾರ	ರಸ್ತೆ ಚರಂಡಿ	0.35
		ಒಟ್ಟು	48.06

ಇ) ಮಂಡ್ಯ ನಗರದ ವಿವಿಧ ಕೊಳಚೆ ಪ್ರದೇಶಗಳಲ್ಲಿನ ಒಟ್ಟು 1285 ಕುಟುಂಬಗಳಿಗೆ ಪುನರ್ವಸತಿ ಸೌಕರ್ಯ ಒದಗಿಸಲಾಗಿದೆ.

ರಾಜ್ಯದಲ್ಲಿ ಕೃಷಿ ಆಯೋಗ ರಚನೆ.

2452(1933)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಕೃಷಿ ಆಯೋಗ ರಚಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಆ. ಹಾಗಿದ್ದಲ್ಲಿ, ಇದರ ಮೂಲ ಉದ್ದೇಶಗಳೇನು.

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ. ಇದೆ, ರಚಿಸಲಾಗಿದೆ.

ಆ. ರಾಜ್ಯದ 10 ಕೃಷಿ ಹವಾಮಾನ ಪ್ರದೇಶದಲ್ಲಿನ ವಾಸ್ತವಿಕ ಇಳುವರಿ ಮತ್ತು ಸಾಧ್ಯತಾ ಇಳುವರಿಗಳಲ್ಲಿನ ಅಂತರವನ್ನು ಕಡಿಮೆಗೊಳಿಸಲು ಉದ್ದಿಷ್ಟಕಾರ್ಯಗಳನ್ನು ಗುರುತಿಸುವುದು ಆಯೋಗವು ತೆಗೆದುಕೊಳ್ಳಬೇಕಾದ ತಕ್ಷಣದ ಕಾರ್ಯವಾಗಿರುತ್ತದೆ.